**<u>2 ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮದ್ದೂರು</u>**
**<u>ಸಿ.ಸಿ. 2407/2022</u>**

**ಫಿರ್ಯಾಧಿದಾರರುಃ ಮದ್ದೂರು ಪೋಲಿಸ್ ಠಾಣೆ**

**-ವಿರುದ್ಧ-**

**ಆರೋಪಿಃ -** **ಅಭಿಷೇಕ್ ಎಂ ಎಸ್ ಬಿನ್ ಸಿದ್ದರಾಮೇಗೌಡ,**
**24 ವರ್ಷ, ವಾಸಃ ಮುತ್ತನಹಳ್ಳಿ ಗ್ರಾಮ,**
**ಸಿ ಎ ಕೆರೆ ಹೋಬಳಿ, ಮದ್ದೂರು ತಾಲ್ಲೂಕು.**

**<u>-ಃ ದೋಷಾರೋಪಣೆಃ-</u>**

ಶ್ರೀ. **ಕಿರಣ್ ಎಸ್.ಪಿ..,** ಬಿ.ಬಿ.ಎಂ., ಎಲ್.ಎಲ್.ಬಿ., 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಮದ್ದೂರು ಆದ ನಾನು ಈ ಮೇಲ್ಕಂಡ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ :

ದಿಃ 16/09/2022 ರಂದು ಸಂಜೆ 4-00 ಗಂಟೆ ಸಮಯದಲ್ಲಿ ಮದ್ದೂರು ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ಟೌನ್ ನ ಜೀವ ವಿಮಾ ನಿಗಮದ (ಎಲ್ ಐ ಸಿ) ಕಚೇರಿ ಕಾಂಪೌಂಡ್ ಬಳಿಯಲ್ಲಿ ಚಾಸಾ.1 ರವರ ಬಾಬ್ತು 50,000/- ರೂಪಾಯಿ ಬೆಲೆ ಬಾಳುವ ಕೆಎ-11 ಡಬ್ಲ್ಯೂ-7450 ಹಿರೋ ಹೋಂಡಾ ಸ್ಪೆಂಡರ್ ಪ್ಲಸ್ ಮೋಟಾರ್ ಸೈಕಲ್ ನ್ನು ಆರೋಪಿಯಾದ ನೀನು ಅಕ್ರಮ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಮೋಟಾರ್ ಸೈಕಲ್ ನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಶಿಕ್ಷರ್ಹಾವಾದ ಅಪರಾಧವನ್ನು ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

ಪ್ರಶ್ನೆಃ1. ಈ ಮೇಲೆ ಹೇಳಿ, ನಿಮಗೆ ವಿವರಿಸಲಾದ, ಈ ದೋಷಾರೋಪಣೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆಃ2. ಈ ಮೇಲೆ ಹೇಳಿದ ದೋಷಾರೋಪಣೆ ಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

*(ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿಗೆ ಅವರಿಗೆ ತಿಳಿಯುವಂತಹ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ, ಅವರು ಕೊಟ್ಟಂತಹ ಉತ್ತರವನ್ನು ಅವರ ಭಾಷೆಯಲ್ಲಿಯೇ ಯಥವತ್ತಾಗಿ ನನ್ನ ಕೈ ಬರಹದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದೇನೆ.)*

*(ಶ್ರೀ ಕಿರಣ್ ಎಸ್.ಪಿ)*
ದಿನಾಂಕಃ09-11-2022 2 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ಮದ್ದೂರು.